O.S.No.:510/2016
P.W.:2

ಈ ದಿನ ದಿಃ18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಸಿಜಿಪಿ ರವರಿಂದಃ-**

1. ವಾದಿಯು ಸೈಟು ತಮ್ಮದು ಎಂದು ಈ ದಾವೆಯನ್ನು ಹೂಡಿರುತ್ತಾರೆ. ನಾನು ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ವಾಸವಿರುವ ಕಾರಣಕ್ಕೆ ನಾನು ನನ್ನ ವಾಸಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ನಾನು ಸ್ನೇಹಿತರು ಎಂದರೆ ಸರಿಯಲ್ಲ.

2. ದಾವಾಸ್ವತ್ತಿನ ಖಾತೆ ನಂ.275 ಆಗಿರುತ್ತದೆ. ದಾವಾಸ್ವತ್ತಿನ ಪೂರ್ವಕ್ಕೆ ಸಿದ್ದಮ್ಮ ರವರು ಇದ್ದಾರೆ ಎಂದರೆ ಸರಿ. ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿ. ಉತ್ತರಕ್ಕೆ ಚಿಕ್ಕತಾಯಮ್ಮ ಮತ್ತು ಸಿದ್ದೇಗೌಡ ರವರು ಇದ್ದಾರೆ ಎಂದರೆ ಸರಿ. ದಕ್ಷಿಣಕ್ಕೆ ಚಿಕ್ಕೀರೇಗೌಡ ರವರ ಖಾಲಿ ನಿವೇಶನ ಇದೆ ಎಂದರೆ ಸಾಕ್ಷಿಯು ನಾವು ಮನೆ ಕಟ್ಟಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ದಾವಾಕಾನೇಸುಮಾರಿ ಸಂಖ್ಯೆ ಮೂಲ ಸರ್ವೆ ನಂ.1/10 ಎಂದರೆ ಸರಿ. ಸರ್ವೆ ನಂ.1/10ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು 90 ಅಡಿ ಉದ್ದ 41 ಅಡಿ ಅಗಲ ಜಾಗಕ್ಕೆ ಸಂಬಂಧಿಸಿದಂತೆ ವಾದಿಯು ಹೂಡಿರುತ್ತಾರೆ. ಸರ್ವೆ ನಂ.1/10 ಮೂಲತಃ ಸಿದ್ದೇಗೌಡ ರವರಿಗೆ ಸೇರಿತ್ತು ಎಂದರೆ ಸರಿ. ಸರ್ವೆ

ನಂ.1/10ರಲ್ಲಿ 10 ಗುಂಟೆ ಜಮೀನು ನಂಜಮ್ಮ ರವರಿಗೆ ಸೇರಿತ್ತು ಎಂದರೆ ಸಾಕ್ಷಿಯು ಅದರಲ್ಲಿ ಇಬ್ಬರಿಗೆ ಭಾಗ ಇದೆ ಎಂದು ನುಡಿಯುತ್ತಾರೆ. ನಂಜಮ್ಮ ರವರು ತೀರಿಕೊಂಡ ನಂತರ ಸದರಿ 10 ಗುಂಟೆ ಜಮೀನು ಮಾಯಮ್ಮ ರವರಿಗೆ ಬಂದಿತ್ತು ಎಂದರೆ ಸಾಕ್ಷಿಯು ಮಾಯಮ್ಮ ಮತ್ತು ಮಂದೇಗೌಡ ಇಬ್ಬರಿಗೂ ಬಂದಿತ್ತು ಎಂದು ನುಡಿಯುತ್ತಾರೆ. ವಾದಿಯ ತಂದೆಗೆ ಸರ್ವೆ ನಂ.1/10ರಲ್ಲಿ ಯಾವಾಗ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.

3. 1993-94ರಲ್ಲಿ ದಾವಾಸ್ವತ್ತು ಮತ್ತು ಕುಟುಂಬದ ಇತರ ಸ್ವತ್ತುಗಳಲ್ಲಿ 2ನೇ ಪ್ರತಿವಾದಿಯ ತಾಯಿ ಮಾಯಮ್ಮ ಮತ್ತು ಆಕೆಯ ಗಂಡನ ಸಹೋದರರ ನಡುವೆ ವಿಭಾಗ ಆಗಿತ್ತು, ಆ ವಿಭಾಗದಲ್ಲಿ ದಾವಾಸ್ವತ್ತು 2ನೇ ಪ್ರತಿವಾದಿಯ ತಾಯಿಯಾದ ಮಾಯಮ್ಮ ರವರ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಮಾಯಮ್ಮ ರವರ ಹೆಸರಿಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಎಂ.ಆರ್ ನಂ.6/93-94ರಂತೆ ಖಾತೆಯು ಸಹ ಅವರ ಹೆಸರಿಗೆ ಆಗಿತ್ತು ಎಂದರೆ ಸರಿಯಲ್ಲ. ನಂತರದಲ್ಲಿ ಮಾಯಮ್ಮ ರವರ ಮಕ್ಕಳು ಅವರ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡಾಗ ದಾವಾಸ್ವತ್ತು 2ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

4. ಸರ್ವೆ ನಂ.1/10ರ ಖಾತೆಯು ಈಗಲೂ ಸಹ 1ನೇ ಪ್ರತಿವಾದಿಯ ಹೆಸರಿಗೆ

ಇದೆ ಎಂದರೆ ಸರಿಯಲ್ಲ. ದಿನಾಂಕ.22.03.1976ರಲ್ಲಿ ಸರ್ವೆ ನಂ.1/10ರಲ್ಲಿ ನಮ್ಮ ತಂದೆಗೆ ಜಮೀನು ಮಾರಾಟ ಮಾಡುವ ಕಾಲಕ್ಕೆ ಆ ಜಮೀನಿನ ಖಾತೆಯು ನಿಮ್ಮ ಮಾರಾಟಗಾರರಾದ ಗಿರಿಗೌಡ ಉಃ ಮಂದೇಗೌಡ ರವರ ಹೆಸರಿಗೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ಸರ್ವೆ ನಂ.1/10ರಲ್ಲಿ ಜಮೀನನ್ನು ಮಾರಾಟ ಮಾಡುವ ಕಾಲಕ್ಕೆ ಆ ಜಮೀನಿನ ಖಾತೆ ಪಹಣಿಗಳು ಸಿದ್ದೇಗೌಡ ರವರ ಹೆಸರಿನಲ್ಲಿ ಆಗಲೀ, ಗಿರಿಗೌಡ ಉಃ ಮಂದೇಗೌಡ ರವರ ಹೆಸರಿನಲ್ಲಿ ಆಗಲೀ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.1/10ಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಯಪತ್ರಗಳು ಆಗಿಲ್ಲ ಎಂದರೆ ಸರಿಯಲ್ಲ.

5. 2018ನೇ ಇಸವಿಯಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿಗೆ ಮತ್ತು ಪ್ರತಿವಾದಿಗಳಿಗೆ ಜಗಳವಾಗಿತ್ತು ಎಂದರೆ ಸರಿಯಲ್ಲ. ಈ ದಾವಾ ಸಲ್ಲಿಸುವುದಕ್ಕೂ ಮೊದಲು ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಜಗಳ ಆಗಿಲ್ಲ ಎಂದರೆ ಸರಿ. 2018ರಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಆದಂತಹ ಜಗಳದ ವಿಚಾರಕ್ಕೆ ಸಂಬಂಧಿಸಿದಂತೆ ಸಾತನೂರು ಪೊಲೀಸ್ ಠಾಣೆಯಲ್ಲಿ ದೂರು ಸಹ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಜಗಳವಾದ ನಂತರ ಪ್ರತಿವಾದಿಗಳು ವಾದಿಯ ವಿರುದ್ದ ಸರ್ವೆ ನಂ.1/10ಕ್ಕೆ ಸಂಬಂಧಿಸಿದಂತೆ ಒಂದು ದಾವೆಯನ್ನು ಸಹ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಸರ್ವೆ

ನಂ.1/10ರಲ್ಲಿ ಬರುವುದರಿಂದ ಅದು ಕೇವಲ ಪ್ರತಿವಾದಿಗಳಿಗೆ ಮಾತ್ರ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಇಲ್ಲ ಇಬ್ಬರಿಗೂ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ಈಗಲೂ ಸಹ ಸರ್ವೆ ನಂ1/10ರಲ್ಲಿರುವ 10 ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಇಬ್ಬರು ಸಹ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ.

6. ಪ್ರತಿವಾದಿಗಳು ವಾದಿಯ ವಿರುದ್ಧ ಸಲ್ಲಿಸಿದ ಆಸಲು ದಾವಾ ಸಂಖ್ಯೆ 79/2018ರಲ್ಲಿ ನಾನು ಸಹ ಒಬ್ಬ ಉದ್ದೇಶಿತ ಪ್ರತಿವಾದಿಯಾಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಒಬ್ಬ ಪಕ್ಷಕಾರನಾದ ಕಾರಣಕ್ಕೆ ವಾದಿಗೆ ಅನುಕೂಲ ಮಾಡಲು ಈ ದಾವೆಯಲ್ಲಿ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**